ದಿನಾಂಕ: 30.10.2023

ಅಸಲು ದಾವೆ : 58/2019 ಡಿ.ಡಬ್ಲ್ಯೂ.1

**<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮಧ್ಯಂತರ ಅರ್ಜಿ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆ : ಪ್ರತಿವಾದಿ ಪರ ವಕೀಲರಾದ ಶ್ರೀ ಬಿ.ಆರ್ ರವರಿಂದಃ</u>**

ದಿನಾಂಕ 03.04.2014 ರ ಮೂಲ ಕ್ರಯಪತ್ರವನ್ನು ಹಾಜರು ಮಾಡಿದ್ದು ಅದನ್ನು ನಿಡಿ.1 ಎಂದು, ನನ್ನ ತಾಯಿ ಸದರಿ ಕ್ರಯಪತ್ರಕ್ಕೆ ತಮ್ಮ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ. ಶ್ರೀರಾಮ್ ಟ್ರಾನ್ಸ್ ಪೋರ್ಟ್ ಫೈನಾನ್ಸ್ ಕಂಪನಿಯವರು no due certificate ಮತ್ತು ಫಾರಂ ನಂ.35 ನೀಡಿದ್ದು ಅದನ್ನು ನಿಡಿ.2 ಎಂದು, ಅದಕ್ಕೆ ಸಂಬಂಧಪಟ್ಟ ಫಾರಂ ನಂ.35 ಅನ್ನು ಹಾಜರು ಮಾಡಿದ್ದು, ಅದರಲ್ಲಿ ನಾನು 6 ಕಡೆ ಸಹಿ ಮಾಡಿರುತ್ತೇನೆ. ಸದರಿ ಸಹಿಗಳನ್ನು ನಾನು ಗುರುತಿಸಿದ್ದು ನಿಡಿ.2(ಎ), ನಿಡಿ.2(ಬಿ), ನಿಡಿ.2(ಸಿ), ನಿಡಿ.2(ಡಿ), ನಿಡಿ.2(ಡಿ) ಮತ್ತು ನಿಡಿ.2(ಎಫ್) ಎಂದು ಗುರುತಿಸಲಾಯಿತು. ನನ್ನ ಪಿ.ಯು.ಸಿ ಅಂಕಪಟ್ಟಿ ಹಾಜರು ಮಾಡಿದ್ದು, ಅದನ್ನು ನಿಡಿ.3 ಎಂದು , ಅದರಲ್ಲಿ ನಾನು ಸಹಿ ಮಾಡಿದ್ದು ನನ್ನ ಸಹಿಯನ್ನು ನಿಡಿ.3(ಎ) ಎಂದು ಗುರುತಿಸಲಾಯಿತು. ತೆಂಗಿನ ಮರಗಳ ಫಸಲು ಬೋಗ್ಯ ಪತ್ರ ಹಾಜರು ಮಾಡಿದ್ದು, ವಾದಿ ಪರ ವಕೀಲರು ಸದರಿ ದಾಖಲೆ ನೊಂದಣಿಯಾಗಿರುವುದಿಲ್ಲ ಮತ್ತು ಸ್ಟಾಂಪ್ ಡ್ಯೂಟಿ ಕಡಿಮೆ ಇರುತ್ತದೆ ಎಂದು ಆಕ್ಷೇಪ ವ್ಯಕ್ತಪಡಿಸಿರುತ್ತಾರೆ. (ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸದರಿ ದಾಖಲೆಯನ್ನು ಅವರ ಪರವಾಗಿ ಗುರುತಿಸುವುದಿಲ್ಲ ಎಂದು ನುಡಿದಿರುತ್ತಾರೆ.)

**ಪಾಟೀ ಸವಾಲಿಗೆ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.